ಓ.ಎಸ್. ನಂ.  78/2019                                                    ಪಿ.ಡಬ್ಲ್ಯೂ- 3

<u>ಸಾಕ್ಷಿಯನ್ನು ದಿನಾಂಕ  1.3.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ</u>

ನಾನು ವ್ಯವಸಾಯ ಮಾಡುತ್ತೇನೆ.  ಈ ದಾವೆಯನ್ನು ಕೃಷ್ಣಯ್ಯ ಎಂಬುವವರು ಅವರ ಅಣ್ಣನಾದ ಸೋಮಯ್ಯ ರವರ ಮೇಲೆ ಮಾತ್ರ ಹಾಕಿರುತ್ತಾರೆ.  ಜಮೀನಿನಲ್ಲಿ ಪಾಲು ನೀಡುವಂತೆ ದಾವೆ ಹಾಕಿರುತ್ತಾರೆ. ವಾದಿಗೆ ನಾನು ಸೋದರಮಾವನ ಮಗ ಎಂದರೆ ಸರಿ.  ವಾದಿಯು ನಮ್ಮ ಊರಿನಲ್ಲಿ ವಾಸವಾಗಿದ್ದರು ಎಂದರೆ ಸರಿ.  ಬೊಪ್ಪನಹಳ್ಳಿಯಲ್ಲಿ ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಒಂದು ಮನೆಯಿದೆ ಎಂದರೆ ಸರಿ.  ಸದರಿ ಮನೆ ಈಗ ಖಾಲಿಯಿರುತ್ತದೆ.  ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.  ಹಾಲಯ್ಯ ರವರು ನಮ್ಮ ಊರಿನಲ್ಲಿ ತೀರಿಕೊಂಡಿರುತ್ತಾರೆ.  ಹಾಲಯ್ಯ ರವರು ತೀರಿಕೊಂಡ ನಂತರ 3 ನೇ ಪ್ರತಿವಾದಿಯು ಕುಟುಂಬದಿಂದ ಬೇರೆಯಾಗಿ ಹೆಬ್ಬಲುಗುಪ್ಪೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಹೆಬ್ಬಲುಗುಪ್ಪೆಯಲ್ಲಿ ವಾದಿ, 1 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಬೇರೆ ಬೇರೆ ಮನೆ ಮಾಡಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ.  2 ನೇ ಪ್ರತಿವಾದಿಗೆ ಮದುವೆಯಾಗಿ ಬೇರೆಯಾಗಿ ವಾಸವಾಗಿರುತ್ತಾರೆ ಎಂದರೆ ಸರಿ.  ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ವಾಸವಿದ್ದ ಬಗ್ಗೆ ದಾಖಲಾತಿಯನ್ನು ನಾನು ನೋಡಿರುವುದಿಲ್ಲ.  3 ನೇ ಪ್ರತಿವಾದಿಯು ಅವರ ಸಂಪಾದನೆಯಿಂದ ಎಲ್ಲಾ ದಾವಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.  ಸ್ವಂತ ಸಂಪಾದನೆಯಿಂದ ಎಲ್ಲಾ ಆಸ್ತಿಗಳನ್ನು ಖರೀದಿ ಮಾಡಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  3 ನೇ ಪ್ರತಿವಾದಿಯು ಯಾರಿಂದ ಎಷ್ಟು ಹಣಕ್ಕೆ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.  ಸದರಿ ಕ್ರಯಪತ್ರಗಳನ್ನು ನಾನು ನೋಡಿರುವುದಿಲ್ಲ ಮತ್ತು ಅದಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ.  ವಾದಿ ಮತ್ತು ಪ್ರತಿವಾದಿಯರ ಕುಟುಂಬದ ವ್ಯವಹಾರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ.  3 ನೇ ಪ್ರತಿವಾದಿಯು ಸ್ವಂತ ಸಂಪಾದನೆಯಿಂದ ದಾವಆಸ್ತಿಗಳನ್ನು ಖರೀದಿ ಮಾಡಿದ್ದು, ವಾದಿಗೆ ದಾವಆಸ್ತಿಗಳಲ್ಲಿ ಯಾವುದೇ ಪಾಲು ಇರದಿದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ನೋಟಿಸ್ ಬಂದಿರುವುದಿಲ್ಲ.  ಸಾಕ್ಷಿ ನುಡಿಯಲು ವಾದಿಯೇ ನನ್ನನ್ನು ಕರೆದಿರುತ್ತಾರೆ ಎಂದರೆ ಸರಿಯಲ್ಲ. ಈ ದಿನ ಸಾಕ್ಷಿ ನುಡಿಯಲು ನನಗೆ ಸಂಗಮೇಶ್ವರ ವಕೀಲರು ಹೇಳಿರುತ್ತಾರೆ.  ದಾವಆಸ್ತಿಗಳನ್ನು 3 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿದಾರರು ಎಲ್ಲರೂ ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದಾರೆ ಎನ್ನುವರು.  ಅವರು ಏನು ಬೆಳೆ ಬೆಳೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ನಾನು ಬೊಪ್ಪನಹಳ್ಳಿಯಲ್ಲಿ

ವಾಸ ಮಾಡುತ್ತಿದ್ದೇನೆ.  ಬೆಳೆದ ಬೆಳೆಗಳಲ್ಲಿ ವಾದಿ ಮತ್ತು ಪ್ರತಿವಾದಿಯರು ಪಾಲು ಮಾಡಿಕೊಳ್ಳುತ್ತಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.  ನಾನು 3 ನೇ ಪ್ರತಿವಾದಿಯ ಜೊತೆ ಮಾತನಾಡುತ್ತೇನೆ.  ನಾನು ವಾದಿಯ ಜೊತೆ ಚನ್ನಾಗಿದ್ದು ಅವರು ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.